ಮಿಶ್ರತಳಿ ಹತ್ತಿ ಬೀಜಗಳ ಪೂರೈಕೆ

೨೨೭೮. ಶ್ರೀ ಸಿ. ಸಿ. ಕಲಕೋಟಿ (ಹಾವೇರಿ).—ಪಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಿಶ್ರ ತಳಿ ಹತ್ತಿ ಬೀಜಗಳ ಬೇಡಿಕೆಗೆ ಅನುಗುಣವಾಗಿ ಉತ್ಪಾದನೆಯಾಗದಿರುವುದರಿಂದ ರೈತರು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಪರಿಹಾರ ಕಾರ್ಯಕ್ರಮಗಳೇನು ?

ಇ) ಅಧಿಕೃತ ಬೀಜ ಮಾರಾಟಗಾರರಿಗೆ ಕರ್ನಾಟಕ ಬೀಜ ನಿಗಮ ಹತ್ತಿ ಬೀಜಗಳನ್ನು ಪೂರೈಸುತ್ತಿದ್ದು ಈ ಮಾರಾಟಗಾರರು ಗ್ರಾಹಕರಿಗೆ ವಿಧಿಸುತ್ತಿರುವ ಹೆಚ್ಚಿನ ದರವನ್ನು ನಿಯಂತ್ರಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಹಾಗೂ ತೋಟಗಾರಿಕೆ ಮಂತ್ರಿಗಳು).—

ಅ) ಬಂದಿದೆ

ಆ) ಪ್ರಸಕ್ತ ಸಾಲಿನಲ್ಲಿ ಕಂಡು ಬಂದಿರುವ ಸಂಕರ ಹತ್ತಿ ಬೀಜಗಳ ಬೇಡಿಕೆಯನ್ನು ಪೂರೈಸುವ ಸಲುವಾಗಿ ಕರ್ನಾಟಕ ರಾಜ್ಯ ಬೀಜ ನಿಗಮವು ಹತ್ತಿ ಬೆಳೆಯುವ ಇತರ ರಾಜ್ಯಗಳಿಂದ ಸಂಕರ ಹತ್ತಿ ಬೀಜಗಳನ್ನು ಕೊಳ್ಳಲು ಪ್ರಯತ್ನಿಸಿದೆ. ಇದರ ಜೊತೆಗೆ ಖಾಸಗಿ ಬೀಜ ಮಾರಾಟಗಾರರಿಗೆ ನೆಲೆ ರಾಜ್ಯಗಳಲ್ಲಿ ಉತ್ಪಾದಿಸಿರುವ ಪ್ರಮಾಣಿತ ಡಿಸಿಹೆಚ್-೩೨ (ಜಯಲಕ್ಷ್ಮಿ) ಮತ್ತು ವಲಲಕ್ಷ್ಮಿ ಸಂಕರಹತ್ತಿ ಬೀಜಗಳನ್ನು ತಂದು ರಾಜ್ಯದಲ್ಲಿ ಮಾರಾಟ ಮಾಡಲು ಪರವಾನಗಿ ನೀಡಲಾಗಿದೆ. ಖಾಸಗಿ ಮಾರಾಟ ಗಾರರು ಈಗಾಗಲೇ ಈ ದಿಸೆಯಲ್ಲಿ ಕಾರ್ಯ ಪ್ರವೃತ್ತರಾಗಿರುತ್ತಾರೆ ಮತ್ತು ಬೀಜವಿತರಣೆ ಪ್ರಗತಿಯಲ್ಲಿದೆ.

ಇ) ಕರ್ನಾಟಕ ರಾಜ್ಯ ಬೀಜ ನಿಗಮವು ನಿಗಧಿಪಡಿಸಿದ ಬೆಲೆಗೆ ಅಧಿಕೃತ ಬೀಜ ಮಾರಾಟಗಾರರು ಹತ್ತಿ ಬೀಜವನ್ನು ಮಾರಾಟ ಮಾಡಬೇಕಾಗಿರುತ್ತದೆ. ಆದರೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ ಬಗ್ಗೆ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ತುಂಗಾ ಮೇಲ್ದಂಡೆ (ಗಾಜನೂರು ಯೋಜನೆ)

೨೫೧೨. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಪಾನ್ಯ ಕೃಷಿ ಯೋಜನೆ ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಾ ಮೇಲ್ದಂಡೆ ಯೋಜನೆಯ ಸಂಪೂರ್ಣ ಮಾಹಿತಿಯನ್ನೊಳಗೊಂಡ ನಕ್ಷೆ ತಯಾರಾಗಿದೆಯೆ ? ಈ ಯೋಜನೆಯಲ್ಲಿ ಹಂತಗಳು ಎಷ್ಟು ? ಪ್ರತಿ ಹಂತಗಳಿಗೆ ತಗಲುವ ಅಂದಾಜು ವೆಚ್ಚ ವೆಷ್ಟು ? ಹಾಗೂ ನೀರಾವರಿಗೆ ಒಳಪಡುವ ಜಮೀನಿನ ವಿಸ್ತೀರ್ಣವೆಷ್ಟು (ತಾಲ್ಲೂಕುವಾರು, ಹಂತ ವಾರು ವಿವರ ನೀಡುವುದು) ?

ಆ) ಮೊದಲನೆಯ ಹಂತ ಪೂರ್ಣಗೊಳಿಸಲಿರುವ ತೊಂದರೆಗಳೇನು ಮತ್ತು ಈ ಹಂತದಿಂದ ಮುಳುಗಡೆಯಾಗುವ ಪ್ರದೇಶವನ್ನು ಈಗಾಗಲೇ ಸರ್ಕಾರದವರು ಸ್ವಾಧೀನಪಡಿಸಿಕೊಂಡಿರುವರೆ ?

ಇ) ಈ ಯೋಜನೆಗೆ ಯೋಜನಾ ಆಯೋಗದ ಮತ್ತು ಕೇಂದ್ರ ಜಲ ಮಂಡಳಿಯು ಅನುಮತಿ ದೊರೆತಿದೆಯೆ, ಹಾಗಿಲ್ಲದಿದ್ದಲ್ಲಿ ಯಾವ ಹಂತದಲ್ಲಿದೆ ?

ಈ) ಸದರಿ ಯೋಜನೆಯ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು ?

ಉ) ಈ ಯೋಜನೆಯಲ್ಲಿ ಮುಳುಗಡೆಯಾಗುವ ಜಮೀನನ್ನು ಗುರುತಿಸಲಾಗಿದೆಯೆ, ಮುಳುಗಡೆಯಾಗುವ ಜಮೀನಿನ ವಿಸ್ತೀರ್ಣವೆಷ್ಟು, ಮತ್ತು ಜಮೀನುಗಳು ಬರುವ ತಾಲ್ಲೂಕುಗಳು ಯಾವುವು ? (ತಾಲ್ಲೂಕುವಾರು ಮತ್ತು ಜಮೀನುವಾರು ವಿವರ ನೀಡುವುದು).

ಊ) ಭೂ ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರದವರು ಕೈಗೊಳ್ಳಲಾಗಿರುವ ಕ್ರಮವೇನು ?